ಚೆನ್ನಾಗಿದೆ' ಎಂದರು. ತಮ್ಮ ತಂದೆಯ ಹೆಸರಿಗೆ ಅಷ್ಟೇನೂ ಕೋರಸ್ ಬರದಿದ್ದುದನ್ನು ಕಂಡ ತಕ್ಷಣ ಭೋಜೇಗೌಡರು ಎದ್ದು, "ನೋಡಿ ನಮ್ಮಪ್ಪನ ಹೆಸರನ್ನು ಊರಿಗಿಡೋದಕ್ಕೆ ನಂಗೆ ಸುತರಾಂ ಇಷ್ಟವಿಲ್ಲ. ನಾನು ಅಧ್ಯಕ್ಷನಾಗಿ ನಮ್ಮ ಅಪ್ಪನ ಹೆಸರನ್ನೇ ಊರಿಗೆ ಇಟ್ಟರೆ ಅದೇನೋ ಹೇಳ್ತಾರಲ್ಲಾ 'ಸ್ವಜನ ಪಕ್ಷಪಾತ' ಅಂತ ಅಂದ ಹಾಗಾಗುತ್ತೆ. ನಮ್ಮ ತಂದೆಯವ್ರು ಊರಿನ ಜನಕ್ಕೆ ಒಳ್ಳೆಯದನ್ನು ಮಾಡಿದ್ದಾರೆ. ಬಡಬಗ್ಗರಿಗೆ ಸಹಾಯ ಮಾಡಿದ್ದಾರೆ. ಊರಿಗಾಗಿ ತಮ್ಮ ಜೀವ ತೇದವ್ರೆ. ಆದ್ರೂ ನನಗೆ ಶ್ರೀನಿವಾಸರಾಯರ ಮೇಲೆ ಒಂದು ಪಟ್ಟು ಗೌರವ ಜಾಸ್ತಿ ಐತೆ. ಯಾಕಂದ್ರೆ ಅವರು ಊರಿನ ಜನ್ರಿಗೆಲ್ಲ ಸರಿಮಾರ್ಗ ತೋರ್ಸಿದ್ದಾರೆ. ಗಾಂಧೀಜಿಯವರಂತೆ ಬದುಕಿ ಜನ್ರಿಗೆಲ್ಲಾ ಮಾದರಿಯಾಗಿದ್ದಾರೆ. ಅದುಕ್ಕೆ ನಾನು ಹೇಳೋದು ಏನಂದ್ರೆ, ಊರಿಗೆ ಶ್ರೀನಿವಾಸರಾಯರ ಹೆಸರು ಇಟ್ರೆ ಒಳ್ಳೆಯದು ಅನ್ಸುತ್ತೆ" ಎಂದು ಹೇಳಿ ಕುಳಿತುಕೊಂಡ. ಅಧ್ಯಕ್ಷರಿಂದ ಈ ರೀತಿಯ ಮಾತುಗಳನ್ನು ನಿರೀಕ್ಷಿಸಿರದಿದ್ದ ಶಿವರಾಮನಿಗೆ ಕಣ್ಣುಗಳು ತುಂಬಿಬಂದವು.

ಈ ಸಭೆಗೆ ಎರಡು ದಿನ ಮುಂಚೆಯೇ ಭೋಜೇಗೌಡನು ಊರಿನ ನಾಮಕರಣದ ವಿಚಾರವಾಗಿ ಚರ್ಚಿಸಲು ತನ್ನ ಆಪ್ತ ಬಳಗವನ್ನು ಮನೆಗೆ ಕರೆದಿದ್ದನು. ಆದರೆ, ಆಶ್ಚರ್ಯವೆಂಬಂತೆ ಈ ಸಭೆಗೆ ಶಿವರಾಮರೆಡ್ಡಿಯನ್ನೂ ಕರೆದಿದ್ದನು. ಶ್ರೀನಿವಾಸರಾಯರ ಪಕ್ಕಾ ಅನುಯಾಯಿಯಾಗಿ ಅವರ ಹೆಸರನ್ನಲ್ಲದೆ ಬೇರೆ ಹೆಸರನ್ನು ಸೂಚಿಸಲಾರ ಎಂದು ಗೊತ್ತಿದ್ದರೂ ಕೂಡ ಅವರ ಆಪ್ತ ಬಳಗದ ಜೊತೆಗೆ ತನ್ನನ್ನು ಚರ್ಚೆಗೆ ಕರೆದಿದ್ದುದರ ತಂತ್ರ ಶಿವರಾಮನಿಗೆ ಅರ್ಥವಾಗಿರಲಿಲ್ಲ. ಶತ್ರುಗಳೊಂದಿಗೆ ಯುದ್ಧ ಮಾಡುವ ಬದಲು ಅವರನ್ನು ತಮ್ಮ ಸ್ನೇಹವಲಯಕ್ಕೆ ಸೇರಿಸಿಕೊಳ್ಳುವುದು ಭೋಜೇಗೌಡನ ತಂತ್ರಗಾರಿಕೆ ಇರಬೇಕು ಎಂದುಕೊಂಡ ಶಿವರಾಮ. ಆದ್ದರಿಂದ ತಾನು ಶ್ರೀನಿವಾಸರಾಯರ ಹೆಸರು ಹೇಳಿದಾಗ ಅದನ್ನು ವಿರೋಧಿಸಿ ತಮ್ಮ ತಂದೆಯ ಹೆಸರನ್ನು ಹೇಳುತ್ತಾರೆ ಎಂದುಕೊಂಡಿದ್ದ ಶಿವರಾಮನಿಗೆ ಅಚ್ಚರಿಯಾಗುವಂತೆ, ಶ್ರೀನಿವಾಸರಾಯರ ಹೆಸರನ್ನೇ ತಾನೂ ಕೂಡ ಅನುಮೋದಿಸಿ ಭೋಜೇಗೌಡರು ಎಲ್ಲರಿಗೂ ಆಶ್ಚರ್ಯವಾಗುವಂತೆ ಮಾಡಿದ್ದ. ಶಿವರಾಮನಿಗಂತೂ 'ಭೋಜೇಗೌಡರನ್ನು ತಾನು ಇಷ್ಟು ದಿನ ತಪ್ಪಾಗಿ ಅಳೆದಿದ್ದೇನೆಯೇ?' ಎಂದು ಯೋಚಿಸುವಂತಾಯಿತು. ಸಭೆಯನ್ನು ಮುಗಿಸುವ ಸೂಚನೆಯಂತೆ ಅಧ್ಯಕ್ಷರಾದ ಭೋಜೇಗೌಡರು ಶಿವರಾಮ ಮತ್ತು ಊರಿನ ಕೆಲವು ಮುಖಂಡರಿಗೆ ಶ್ರೀನಿವಾಸರಾಯರ ಕೊಠಡಿಗೆ ಹೋಗಿ ಅವರ ಭಾವಚಿತ್ರವೇನಾದರೂ ಸಿಗುತ್ತದೆಯೋ ನೋಡಿ ತರಲು ಹೇಳಿದರು. ಆ ಭಾವಚಿತ್ರವನ್ನು ತೋರಿಸಿ, ಅವರ ಮುಖವನ್ನು ಹೋಲುವ ಒಂದು ಕಂಚಿನ ಪ್ರತಿಮೆ ಮಾಡಿಸಿ, ಊರಿನ ಸರ್ಕಲ್ಲಿನ ಧ್ವಜಸ್ತಂಭದ ಮುಂಭಾಗದಲ್ಲಿ ನೆಡಿಸಿ, ಅದರ ಕೆಳಗೆ ಅವರ ನಿಸ್ವಾರ್ಥ ಸೇವೆಯ ಕುರಿತಂತೆ ನಾಲ್ಕು ಒಳ್ಳೆಯ ಮಾತುಗಳನ್ನು ಬರೆಸಿದರೆ ಅದು ಶಾಶ್ವತವಾಗಿ ಚರಿತ್ರೆಯಲ್ಲಿ ಉಳಿದುಹೋಗುತ್ತದೆ ಎಂಬ ಅಧ್ಯಕ್ಷರ ಅಭಿಪ್ರಾಯಕ್ಕೆ, ಭೋನಾಳೆ ಬೆಳಿಗ್ಗೆಯೇ ಹೋಗಿ ಅವರ ಭಾವಚಿತ್ರವನ್ನು ಕೊಠಡಿಯಲ್ಲಿ ಹುಡುಕುತ್ತೇವೆ' ಎಂದು ಹೇಳಿದ ಶಿವರಾಮನಿಗೆ, ಆ ಕೊಠಡಿಯ ಕೀಯನ್ನು ಭೋಜೇಗೌಡನು ಕೊಟ್ಟನು.

ಜನರೆಲ್ಲಾ ಇನ್ನೇನು ಸಭೆ ಮುಗಿಯಿತು ಎಂದು ಎದ್ದೇಳಲು ಶುರುಮಾಡುತ್ತಿದ್ದಂತೆಯೇ ಸಭೆಯ ವೇದಿಕೆಯನ್ನು ಹತ್ತಲು ಹವಣಿಸುತ್ತಿದ್ದ ಕಂಠಪೂರ್ತಿ ಕುಡಿದಿದ್ದ ಒಬ್ಬ ವ್ಯಕ್ತಿಯಿಂದಾಗಿ ಗದ್ದಲವೇರ್ಪಟ್ಟಿತು. ಎಲ್ಲರೂ ಮನೆಗೆ ಹೋಗುವುದನ್ನು ಮರೆತು, ಆ ಕಡೆ ದೃಷ್ಟಿ ಹರಿಸಿದರು. ಅಲ್ಲಿ ಕುಡಿದು ತೂರಾಡುತ್ತಿದ್ದ ಯರ್ರಿಸ್ವಾಮಿಯು ವೇದಿಕೆಯಲ್ಲಿದ್ದ ಮೈಕ್ ಕಸಿದುಕೊಳ್ಳಲು ಪ್ರಯತ್ನಪಡುತ್ತಿದ್ದ. ಕುಡುಕನಿಗೆ ಮೈಕ್ ಕೊಡಲು ಹೇಗೆ ಸಾಧ್ಯ? ಆದ್ದರಿಂದ ಒಂದಿಬ್ಬರು ಅವನನ್ನು ತಡೆದು, ವೇದಿಕೆಯಿಂದ ದೂರ ಕಳಿಸಲು ಪ್ರಯತ್ನಿಸುತ್ತಿದ್ದರು. ಯರ್ರಿಸ್ವಾಮಿ ಅಲ್ಲಿಂದಲೇ ಜೋರಾಗಿ, 'ಎಲ್ಲಾನು ನೀವ್ ನೀವೇ ಚರ್ಚೆ ಮಾಡಿ, ಇಬ್ಬರ ಹೆಸರನ್ನು ಮೊದ್ಲೇ ತೀರ್ಮಾನಿಸಿದ್ರೆ ನಮ್ಮನ್ನೆಲ್ಲಾ ಚಂದಕ್ಕೆ ಇಲ್ಲಿಗೆ ಕರೆದ್ರಾ ಬೋಸುಡಿಗಳಾ. ಶ್ರೀನಿವಾಸಪ್ಪನೋರು ದೇವ್ರಂತಾ ಮನುಷ್ಯ, ಅವರ ಹೆಸರು ಓಕೆ, ಆದರೆ ತಮ್ಮೇಗೌಡನ ಹೆಸರು ಯಾಕೆ? ಹಾಗಾದ್ರೆ ನಮ್ಮ ಊರಿಗೆ ಎಣ್ಣೆ ಕೊಡುತ್ತಿರೋ ಚಲ್ಯನ ಹೆಸರು ಇಟ್ಟುಬಿಡಿ, ಬಾಳ ಚೆಂದಾಗಿರ್ತತೆ...' ಎಂದು ಹೇಳಿ

